"ಥ್ಯಾಂಕ್ಸ್ ಡಾರ್ಲಿಂಗ್!" ಎನ್ನುತ್ತಾ ಸಿರಿಲ್ ಹೊರಬಿದ್ದ.

ಸುಮಾರು ಒಂದು ಗಂಟೆಯ ನಂತರ ಫೋನ್ ಸದ್ದು ಮಾಡಲಾರಂಭಿಸಿದಾಗ ಮಿಸೆಸ್ ಬ್ರಿಗ್ಸ್ ದಾಪುಗಾಲನ್ನಿಡುತ್ತಾ ಹಾಲನ್ನು ಹೊಕ್ಕು ರಿಸೀವರ್ ಕೈಗೆತ್ತಿಕೊಂಡಳು.

"ಆ ವಸ್ತುವನ್ನು ಬಿಡಿಸಿಕೊಂಡು ಬಂದೆ ಡಾರ್ಲಿಂಗ್!"

"ಏನದು? ಏನದು?" ಅವಳು ಉದ್ವೇಗದಿಂದ ಕೇಳಿದಳು.

"ಕೇಳಿದರೆ ಖಂಡಿತ ನೀನು ತಲೆತಿರುಗಿ ಬೀಳುತ್ತೀಯ ಡಾರ್ಲಿಂಗ್! ನೀನು ತುಂಬಾ ಅದೃಷ್ಟವಂತೆ ಕಣಮ್ಮ!"

"ಹಾಗಾದ್ರೆ ಅದು ನನ್ನ ವಸ್ತು?!"

"ನಿನ್ನದೇ. ಯಾರೋ ತಲೆ ಕೆಟ್ಟವರು ಅದನ್ನು ಗಿರವಿ ಇಟ್ಟು ರಸೀದಿ ಮರೆತಿರಬೇಕು!"

"ಸಿರಿಲ್, ನೀನು ನನ್ನ ತಾಳ್ಮೆಯನ್ನು ಪರೀಕ್ಷಿಸಬೇಡ, ಪ್ಲೀಜ್!"

"ಅದನ್ನು ನೋಡಿದರೆ ನೀನೂ ಹುಚ್ಚಳಾಗುತ್ತಿ ಬಿಡು!"

"ಏನದು, ಬೇಗ ಹೇಳು ಸಿರಿಲ್..."

"ಗೆಸ್ ಮಾಡು ನೋಡುವ?" ಮಿಸೆಸ್ ಬ್ರಿಗ್ಸ್ ಯೋಚಿಸತೊಡಗಿದಳು. ತಾನು ಈಗ ಜಾಗರೂಕಳಾಗಿರಬೇಕು!

"ನೆಕ್ಲೆಸ್?"

"ನೊ, ನೋ..."

"ವಜ್ರದುಂಗುರ?"

"ನಿನಗೊಂದು ಕ್ಲೂ ಕೊಡ್ತೇನೆ ಡಾರ್ಲಿಂಗ್... ಈಗ ಚಳಿ ಶುರುವಾಗಿದೆಯಷ್ಟೇ..."

"ವುಲ್ಲನ್ ಟೋಪಿ?"

"ಹ್ಹ..ಹ್ಹ!... ಖಂಡಿತ ಅಲ್ಲ."

"ನೀನೇ ಹೇಳು ಡಿಯರ್..."

"ಇಲ್ಲ... ನಾನು ಸಂಜೆ ಬರುವಾಗಲೇ ಆ surprise ತರುತ್ತೇನೆ."

"ಸಿ...ರಿ...ಲ್!!... ನಾನು ಈಗಲೇ ಕ್ಲಿನಿಕಿಗೆ ಹೊರಟೆ."

"ಬೇಡ ಡಾರ್ಲಿಂಗ್... ಈಗ ನಾನು ತುಂಬಾ ಬಿಝಿಯಾಗಿದ್ದೇನೆ. ನೀನು ಬಂದರೆ ನನ್ನ ಎಲ್ಲಾ ಕೆಲಸಗಳೂ ಬಾಕಿ ಉಳಿಯುತ್ತವೆ."

"ಹಾಗಾದ್ರೆ ಲಂಚ್ ಹೊತ್ತಿಗೆ ಬರುತ್ತೇನೆ, ಓಕೆನಾ?"

"ನಾನು ಲಂಚ್ ತೆಗೆದುಕೊಳ್ಳುವುದಿಲ್ಲ. ಆದರೂ ಪರವಾ ಇಲ್ಲ. ಒಂದೂವರೆಯ ಹೊತ್ತಿಗೆ ಬಂದು ಬಿಡು. ಸ್ಯಾಂಡ್‌ವಿಚ್ ತಿನ್ನೋಣ, ಬೈ."

ಸರಿಯಾಗಿ ಮಧ್ಯಾಹ್ನ ಒಂದೂವರೆಯ ಹೊತ್ತಿಗೆ ಮಿಸೆಸ್ ಬ್ರಿಗ್ಸ್ ಕ್ಲಿನಿಕ್ಕಿನಲ್ಲಿದ್ದಳು.

ಬಿಳಿ ಕೋಟು ಧರಿಸಿದ್ದ ಸಿರಿಲ್ ಅವಳನ್ನು ಒಳಗೆ ಕರೆದುಕೊಂಡು ಹೋದ.

"ಸಾರಿ ಸಿರಿಲ್... ನನಗೆ ತಡೆಯಲಾಗಲಿಲ್ಲ!"

"ಮಿಸ್ ಪಾಪ್ಲಿನ್, ನೀನು ಲಂಚಿಗೆ ಹೋಗಿ ಬಾರಮ್ಮ." ಕುದಿಯುತ್ತಿರುವ ನೀರಿನಿಂದ ಅವನ ಸಲಕರಣೆಗಳನ್ನು ಹೊರತೆಗೆಯುತ್ತಿದ್ದ ತನ್ನ ಸಹಾಯಕಿಗೆ ಸಿರಿಲ್ ಹೇಳಿದ. ಅವಳು ಹೊರಹೋಗುವವರೆಗೂ ಕಾದಿದ್ದು, ನಂತರ ಅಲ್ಲೇ ಇದ್ದ ಒಂದು ಬೀರುವಿನ ಬಳಿಗೆ ಹೋಗಿ, "ನಿನ್ನ ವಸ್ತು ಇದರೊಳಗಿದೆ ಡಾರ್ಲಿಂಗ್. ಎಲ್ಲಿ ಕಣ್ಣುಮುಚ್ಚು ನೋಡೋಣ? ನಾನು ಹೇಳಿದ ಮೇಲೆಯೇ ತೆರೆಯಬೇಕು!" ಎಂದ.